ಮಹಿಳಾದಿನ
ವಿಶೇಷ

# ಮಿಥಾಲಿ ಪರಂಪರೆಯ ಮೋಡ; ಸ್ಮೃತಿ ವೇಗದ ಹೊಸ ಮಿಂಚು

ಮಿಥಾಲಿ ರಾಜ್ ಹಾಗೂ ಸ್ಮೃತಿ ಮಂದಾನ ಎರಡು ತಲೆಮಾರುಗಳ ಪ್ರತಿನಿಧಿಗಳು. ಮಿಥಾಲಿ ಬೆಳಕು ಕಂತುತ್ತಾ ಹೋಯಿತೇ ಎನ್ನುವ ಪ್ರಶ್ನೆ ದೊಡ್ಡದಾಗುವ ಹೊತ್ತಿಗೇ ಸ್ಮೃತಿ ಎನ್ನುವ ಮಂದಾರತಿ ಈಗ ಬೆಳಗತೊಡಗಿದೆ. ಪರಂಪರೆ, ಸಾವಧಾನದ ಸಂಕೇತದಂತೆ ಮಿಥಾಲಿ ಕಂಡರೆ, ವೇಗದ ವರ್ತಮಾನದ ಪ್ರತಿನಿಧಿಯಂತೆ ಮಂದಾನ ಭಾಸವಾಗುತ್ತಾರೆ.

■ ವಿಶಾಖ ಎನ್.



ಭಾರತೀಯ ಮಹಿಳಾ ಕ್ರಿಕೆಟ್‌ನ ಬೇರು ಮಿಥಾಲಿ ರಾಜ್

2017. ಇಂಗ್ಲೆಂಡ್‌ಗೆ ಹೊರಟಿದ್ದ ಭಾರತ ಕ್ರಿಕೆಟ್ ತಂಡದ ಆಟಗಾರ್ತಿಯರನ್ನು ಬೀಳ್ಕೊಡಲು ವಿಮಾನ ನಿಲ್ದಾಣದಲ್ಲಿ ಕೆಲವೇ ಪೋಷಕರು–ಸ್ನೇಹಿತರಿದ್ದರು. ವಿಶ್ವಕಪ್ ಆಡಲು ಅಲ್ಲಿಗೆ ಹೊರಟಿದ್ದ ಏಕದಿನ ಕ್ರಿಕೆಟ್ ತಂಡದ ಬಗೆಗೆ ಬಹುತೇಕರಲ್ಲಿ ನಿರುತ್ಸಾಹ. ನಾಯಕಿ ಮಿಥಾಲಿ ರಾಜ್ ತಮ್ಮಿಷ್ಟದ ಪುಸ್ತಕ ಹಿಡಿದು ಓದುತ್ತಾ ಕುಳಿತಿದ್ದರು. ಮಾಧ್ಯಮಮಿತ್ರರಲ್ಲೂ ಆಟಗಾರ್ತಿಯರನ್ನು ಮಾತನಾಡಿಸುವ ಉತ್ಸಾಹ ಅಷ್ಟಕ್ಕಷ್ಟೆ. ಶಾಸ್ತ್ರಕ್ಕೆಂದು ಸುದ್ದಿಗೋಷ್ಠಿ ನಡೆಯಿತು.

2013ರ ವಿಶ್ವಕಪ್‌ನಲ್ಲಿ ಗುಂಪು ಹಂತದಲ್ಲೇ ತಂಡ ನಿರ್ಗಮಿಸಿದ್ದರಿಂದ ಭಾರತದ ವನಿತೆಯರ ಕ್ರಿಕೆಟ್ ಕೌಶಲದ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದವರು ಕಡಿಮೆ. ಆದರೆ, ಕೋಚ್ ತುಷಾರ್ ಅರೋಥೆ ಅವರಿಗೆ ಆಟಗಾರ್ತಿಯರ ಮೇಲೆ ಎಂಥದ್ದೋ ನಂಬಿಕೆ. ಹೊರಡುವ ಮುಂಚೆ ಅವರು ತಂಡದ ಎಲ್ಲ ಆಟಗಾರ್ತಿಯರನ್ನೂ ಸಭೆಯೊಂದಕ್ಕೆ ಕರೆದರು. ನಾಯಕಿ ಮಿಥಾಲಿ ಸೇರಿ ಎಲ್ಲರಿಗೂ 'ಇದ್ದಕ್ಕಿದ್ದಂತೆ ಸಭೆ ಯಾಕೆ' ಎಂಬ ಪ್ರಶ್ನೆ. ಅಲ್ಲಿ ಅರೋಥೆ ಕೇಳಿದ ಪ್ರಶ್ನೆ: 'ನಾವು ಇಂಗ್ಲೆಂಡ್‌ಗೆ ಯಾಕೆ ಹೋಗುತ್ತಿದ್ದೇವೆ'. ಹಾಗೆ ಕೇಳಿದ್ದೇ, ಅವರು ನಾಯಕಿಯ ಕಡೆ ನೋಡಿದರು. 'ವಿಶ್ವಕಪ್ ಗೆಲ್ಲೋದಕ್ಕೆ' ಎಂದು ಮಿಥಾಲಿ ಉತ್ತರ ಕೊಟ್ಟ ತಕ್ಷಣವೇ ಸಭೆ ಮುಗಿಯಿತು. ಬರೀ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲು ಹೋಗುತ್ತಿಲ್ಲ ಎಂಬ ಸಂದೇಶವನ್ನು ಎಲ್ಲ ಆಟಗಾರ್ತಿಯರಿಗೂ ದಾಟಿಸುವುದು ಆ ಸಭೆಯ ಉದ್ದೇಶವಾಗಿತ್ತು.

2017ರ ಜುಲೈ 23ರಂದು ಇಂಗ್ಲೆಂಡ್ ವಿರುದ್ಧ ಫೈನಲ್ಸ್‌ನಲ್ಲಿ ಭಾರತದ ವನಿತೆಯರು ಬರೀ 9 ರನ್‌ಗಳಿಂದ ಸೋತರು. ಆದರೆ, ವಿಮಾನ ನಿಲ್ದಾಣಕ್ಕೆ ಮರಳಿದಾಗ ಅವರನ್ನು ಎದುರುಗೊಳ್ಳಲು ಸೇರಿದ್ದ ಜನರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಿತ್ತು.

ಭಾರತ ವನಿತೆಯರ ಕ್ರಿಕೆಟ್ ತಂಡದ ಪುನರುತ್ಥಾನ ಯಾವ ಮಟ್ಟಕ್ಕೆ ಆಯಿತು ಎನ್ನುವುದಕ್ಕೆ ಈ ವಿಮಾನ ನಿಲ್ದಾಣದ ಘಟನಾವಳಿಗಳು ಒಂದು ಬಗೆಯಲ್ಲಿ ರೂಪಕದಂತೆ ಕಾಣುತ್ತವೆ. ಮಿಥಾಲಿ ಹಾಗೂ ಝೂಲನ್ ಗೋಸ್ವಾಮಿ ಇಬ್ಬರನ್ನು ಹೊರತುಪಡಿಸಿದರೆ ಮಿಕ್ಕೆಲ್ಲ ಆಟಗಾರ್ತಿಯರಿಗೆ ಅದು ಮೊದಲ ವಿಶ್ವಕಪ್ ಆಗಿತ್ತು. ಹೀಗಾಗಿ ಅಂತಿಮ ಹಂತ ಪ್ರವೇಶಿಸಿದ್ದು ಎಲ್ಲರ ಪಾಲಿಗೆ ಒಂದು ರೀತಿಯ ಇಂಧನ.